**ರಾಮಯ್ಯ ಆಸ್ಪತ್ರೆಗೆ ದಾರಿ ಎಂಬ ನಾಮಫಲಕವನ್ನು ರಾಜ್ಯಾದ್ಯಂತ ಹಾಕಿರುವುದನ್ನು ತೆಗೆಸುವ ಬಗ್ಗೆ**

1082 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎಂ.ಎಸ್. ರಾಮಯ್ಯ ಆಸ್ಪತ್ರೆಯಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ ರಾಜ್ಯಾದ್ಯಂತ ಬೆಂಗಳೂರಿಗೆ ಬರುವ ಎಲ್ಲ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ "ಎಂ. ಎಸ್. ರಾಮಯ್ಯ ಆಸ್ಪತ್ರೆಗೆ ದಾರಿ" ಎಂಬ ನಾಮಫಲಕಗಳನ್ನು ಹಾಕಿರುವುದನ್ನು ಸರ್ಕಾರ ಗಮನಿಸಿದೆಯೇ (ಉದಾ: ಕೋಲಾರದಲ್ಲಿ ಚಿತ್ರದುರ್ಗದಲ್ಲಿ, ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ)

ಇ) ಗಮನಿಸಿದ್ದಲ್ಲಿ ಲೋಕೋಪಯೋಗಿ ಇಲಾಖೆಗಳ ರಸ್ತೆಗಳಲ್ಲಿ ಹಾಕಿರುವ ಈ ನಾಮಫಲಕಕ್ಕೆ ಮೇಲ್ಕಂಡ ಸಂಸ್ಥೆಯಿಂದ ಶುಲ್ಕವೇನಾದರೂ ವಸೂಲು ಮಾಡಲಾಗುತ್ತಿದೆಯೇ?

ಈ) ಮಾಡುತ್ತಿದ್ದಲ್ಲಿ ಪ್ರತಿ ವರ್ಷ ಎಷ್ಟು ಶುಲ್ಕವನ್ನು ಮೇಲ್ಕಂಡ ಸಂಸ್ಥೆಯಿಂದ ವಸೂಲು ಮಾಡಲಾಗುತ್ತಿದೆ?

ಉ) ಮೇಲ್ಕಂಡ ಸಂಸ್ಥೆಯ ಆಸ್ಪತ್ರೆ ಬೆಂಗಳೂರು ನಗರದಲ್ಲಿದ್ದು ನಾಮಫಲಕಗಳು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇರುವುದರಿಂದ ಇದು ಜನರಿಗೆ ದಾರಿ ತಪ್ಪಿಸುವ ತಂತ್ರವಲ್ಲವೇ?

ಊ) ರಾಜ್ಯಾದ್ಯಂತ ಇರುವ ಈ ನಾಮಫಲಕಗಳನ್ನು ತೆಗೆದುಹಾಕಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ತಿಳಿದಿದೆ.

ಆ) ಅನಧಿಕೃತವಾಗಿ ರಸ್ತೆಗಳ ಬಳಿ ನಾಮಫಲಕಗಳನ್ನು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ನಾಮಫಲಕಗಳನ್ನು ರಸ್ತೆಗಳ ಬಳಿ ಅನಧಿಕೃತವಾಗಿ ಹಾಕಿರುವುದರಿಂದ ತಪ್ಪು ಮಾಹಿತಿಯುಂಟಾಗುವ ಸಂಭವವಿದೆ.

ಊ) ರಸ್ತೆಗಳಿಗೆ ಸೇರಿದ ಜಮೀನಿನ ಗಡಿ ವ್ಯಾಪ್ತಿಯಲ್ಲಿ ಇರುವ ನಾಮಫಲಕಗಳನ್ನು ತೆಗೆದು ಹಾಕಲಾಗುವುದು.

**ಸೇಡಂ ತಾಲ್ಲೂಕಿನ ಲಂಬಾಣಿ ತಾಂಡಗಳು ಹಾಗೂ ಹರಿಜನ ಬಸ್ತಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು**

982 - ಶ್ರೀ ಬಸವಂತ ರೆಡ್ಡಿ ಮೊರ್ತಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಆಗದೇ ಉಳಿದಿರುವ ತಾಂಡಗಳು ಮತ್ತು ಹರಿಜನ ಬಸ್ತಿಗಳ ಸಂಖ್ಯೆ ಎಷ್ಟು?

ಆ) ಅದರಲ್ಲಿ ಈ ವರ್ಷ 90-91 ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ಮಂಜೂರಿಯಾದ ತಾಂಡಾಗಳು ಯಾವುವು?